# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ

E-mail : kannadapostnews@gmail.com / ಕನ್ನಡ post

Price: ₹1

Vol.No.02 | Issue. 115 | Pages. 2 | Date: 08-04-2026, WEDNESDAY RNI NO: KARKAN/2024/89601 Kannada Daily

ಸಂಪುಟ : 02 – ಸಂಚಿಕೆ : 115 – ಪುಟಗಳು : 2 08-04-2026 ಬುಧವಾರ Ph: 8762954248 ದರ : ₹1


# ಹಕ್ಕುಪತ್ರ ಇದ್ದರೂ ಅಧಿಕಾರಿಗಳಿಂದ ಕಿರುಕುಳ

## ಅರಕಲಗೂಡಿನಲ್ಲಿ ಇಂದಿನಿಂದ ಪ್ರತಿಭಟನೆ | ಎ.ಟಿ.ರಾಮಸ್ವಾಮಿ ನೇತೃತ್ವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಕಲಗೂಡು ತಾಲ್ಲೂಕು ಅಬ್ಬೂರು ಮಾಚಗೌಡನಹಳ್ಳಿ ಗ್ರಾಮದಲ್ಲಿ ಹತ್ತಾರು ಬಡ ಕುಟುಂಬಗಳನ್ನು ಬೀದಿಗೆ ತಳ್ಳುವ ವ್ಯವಸ್ಥಿತ ಪಿತೂರಿ ತಾಲ್ಲೂಕು ಆಡಳಿತದಿಂದ ನಡೆಯುತ್ತಿದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಸ್.ಬಿ.ರೇವಣ್ಣ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ತಾವು ಪ್ರತಿಪಕ್ಷದಲ್ಲಿದ್ದಾಗ ಆಶ್ರಯ ಯೋಜನೆಯಡಿ ಮನೆ ಕಟ್ಟಿಕೊಳ್ಳಲು ನೆರವಾಗಿದ್ದ ಹಾಲಿ ಶಾಸಕ ಎ.ಮಂಜು ಅವರು ಈಗ ಉಲ್ಟಾ ಹೊಡೆಯುತ್ತಿದ್ದು, ಹತ್ತಾರು ಕುಟುಂಬಗಳು ಬೀದಿಗೆ ಬರುವಂತಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಸಹ ಬಡವರ ಪರವಾಗಿ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಗ್ರಾಮದಲ್ಲಿ ಆಶ್ರಯ ಯೋಜನೆಯಡಿ 1991-92 ರಲ್ಲಿ ಹಕ್ಕುಪತ್ರ ನೀಡಿದ್ದ ಜಾಗದಲ್ಲಿ ಫಲಾನುಭವಿಗಳು ಕಟ್ಟಿಕೊಂಡಿದ್ದ ಮನೆಗಳನ್ನು ತಹಶೀಲ್ದಾರ್ ಸಿ.ಸೌಮ್ಯ ಅವರು ಏಕಾಏಕಿ ತೆರವುಗೊಳಿಸಿದ್ದಾರೆ. 1991-92ರ ಅವಧಿಯಲ್ಲಿ ಹಕ್ಕುಪತ್ರ ನೀಡಲಾಗಿದೆ ಎಂದು ದಾಖಲೆಗಳನ್ನು ತೋರಿಸಿದರೂ ಪ್ರಯೋಜನವಾಗಿಲ್ಲ. ಎ.ಟಿ.ರಾಮಸ್ವಾಮಿ ಅವರು




ಶಾಸಕರಾಗಿದ್ದಾಗ ನಿವೇಶನ ನೀಡಲಾಗಿತ್ತು. ಆದರೀಗ ಯಾವುದೇ ನೋಟೀಸ್ ನೀಡದೇ ಕಟ್ಟಡ ನಾಶಪಡಿಸಲಾಗಿದೆ.

ಅಲ್ಲಿ ದಲಿತರು, ಅಲ್ಪಸಂಖ್ಯಾತರು, ಬಡ ಒಕ್ಕಲಿಗರು ಹೀಗೆ ಎಲ್ಲ ಸಮುದಾಯದವರಿದ್ದಾರೆ. ಅಲ್ಲಿದ್ದ 78 ಎಕರೆ ಗೋಮಾಳದಲ್ಲಿ ಸುಮಾರು 20 ಎಕರೆಯನ್ನು ಬಲಾಢ್ಯರು ಒತ್ತುವರಿ ಮಾಡಿದ್ದಾರೆ. ಅವರನ್ನು ಬಿಟ್ಟು, ಈಗ ಬಡವರ ವಿರುದ್ಧ ಹಗೆತನ ಸಾಧಿಸಲಾಗುತ್ತಿದೆ. 1 ಎಕರೆ 10 ಗುಂಟೆ ಜಾಗದಲ್ಲಿ ಮನೆ ನಿರ್ಮಿಸಿಕೊಂಡಿದ್ದ 10ಕ್ಕೂ ಅಧಿಕ ಕುಟುಂಬಗಳ ವಿರುದ್ಧ ಅಧಿಕಾರಿಗಳು ಗದಾ ಪ್ರಹಾರ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಮನೆ ಕಳೆದುಕೊಂಡ ಕುಟುಂಬಗಳಿಗೆ ತಕ್ಷಣ ಪರಿಹಾರ ನೀಡಬೇಕು. ಅದು ಆಗದಿದ್ದರೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಯಾರಿಗೂ ಅನ್ಯಾಯ ಆಗಬಾರದು

> ಜಿಲ್ಲೆಯಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ನಾನು ಕಾಂಗ್ರೆಸ್ ಪಕ್ಷದ ಸದಸ್ಯನಾಗಿದ್ದರೂ ಜನರ ಸಮಸ್ಯೆ ಕಂಡು ಸುಮ್ಮನಿರಲು ಆಗುತ್ತಿಲ್ಲ. ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾಧಿಕಾರಿ ಕಚೇರಿ ಸಂಪೂರ್ಣ ಯಾರದೋ ಕಪಿಮುಷ್ಟಿಗೆ ಸಿಲುಕಿ ಕೆಲಸ ಮಾಡುತ್ತಿರುವ ಸಂಶಯ ಮೂಡಿದೆ.
>
> **– ಎಸ್.ಬಿ.ರೇವಣ್ಣ, ಜಿಪಂ ಮಾಜಿ ಸದಸ್ಯ**

ಎಂದರೆ ಸ್ಥಳೀಯ ಶಾಸಕರು ಕೂಡಲೇ ನಿಷ್ಪಕ್ಷಪಾತ ತನಿಖೆಗೆ ಆದೇಶಿಸಬೇಕು. ಈ ಬೇಡಿಕೆ ಮುಂದಿಟ್ಟು ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಅವರ ನೇತೃತ್ವದಲ್ಲಿ ಏ. 8ರಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ನಿವಾಸಿ ಅಕ್ರಂ ಪಾಷ ಮಾತನಾಡಿ, ಸರ್ವೆ ನಂ.94ರಲ್ಲಿ ಹೆಚ್‌ಯುಡಿ 535 ಕೆಹೆಚ್‌ಬಿ 91 ರ ಅನ್ವಯ ಸುಮಾರು 60 ಮಂದಿಗೆ ಹಕ್ಕು ಪತ್ರ ವಿತರಿಸಲಾಗಿತ್ತು. ಇದೀಗ 34 ಮಂದಿ ಬಳಿ ಹಕ್ಕುಪತ್ರ ಇದ್ದು, ಆ ಪೈಕಿ 8-10 ಮಂದಿ ಮನೆ ಕಟ್ಟಿಕೊಂಡಿದ್ದರು. ಆದರೀಗ ಯಾವುದೇ ಸೂಚನೆ ನೀಡದೇ ನೆಲಸಮ ಮಾಡಲಾಗಿದೆ. ಆಡಳಿತ ವೈಫಲ್ಯದಿಂದ ನಮ್ಮ ಬದುಕು ಬೀದಿಗೆ ಬಂದಿದೆ. ನಮಗೆ ಸೂಕ್ತ ಪರಿಹಾರ ಜೊತೆಗೆ ಸ್ವಂತ ಮನೆ ಹೊಂದಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ತಾಲ್ಲೂಕು ಆಡಳಿತದ ಅನ್ಯಾಯ ಖಂಡಿಸಿ ಬುಧವಾರ ಅರಕಲಗೂಡಿನ ಅಂಬೇಡ್ಕರ್ ಪ್ರತಿಮೆ ಎದುರು ರೈತ ಸಂಘ ಹಾಗು ಪ್ರಗತಿಪರ ಸಂಘಟನೆಗಳಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸುತ್ತಿದ್ದೇವೆಂದರು.

ಸುದ್ದಿಗೋಷ್ಟಿಯಲ್ಲಿ ಕಾಂತರಾಜು, ಕೆಡಿಪಿ ಸದಸ್ಯ ಅಹಮದ್‌ಜಾನ್, ಮುಜಾಯಿದ್, ಅಬ್ದುಲ್ ನದೀಫ್ ಇದ್ದರು.

## ಗ್ರಾಮ ಅಭಿವೃದ್ಧಿಗೆ ಜಾಗ ಮೀಸಲಿಡಿ

ಅರಕಲಗೂಡು: ತಾಲೂಕಿನ ಅಬ್ಬೂರು ಮಾಚಗೌಡನಹಳ್ಳಿ ಗ್ರಾಮದ ಸರ್ವೆ ನಂ. 94ರ ಗೋಮಾಳದ ಜಾಗವನ್ನು ಊರಿನ ಅಭಿವೃದ್ಧಿ ಕಾಮಗಾರಿಗೆ ಮೀಸಲಿಡಬೇಕು ಎಂದು ಗ್ರಾಪಂ ಮಾಜಿ ಸದಸ್ಯ ಎಂ.ಬಿ. ಸ್ವಾಮಿ ಒತ್ತಾಯಿಸಿದರು.

ಗ್ರಾಮದ ಸರ್ವೆ ನಂ.94ರಲ್ಲಿ 174 ಎಕರೆ ಗೋಮಾಳ ಇದ್ದು ಈ ಪೈಕಿ ಸರ್ಕಾರಿ ಪ್ರೌಢಶಾಲೆ ಹಾಗೂ ಕೆಲವರು ಮನೆ ನಿರ್ಮಿಸಿಕೊಂಡಿದ್ದು ಭೂಮಿ ಇಲ್ಲದ ಗ್ರಾಮಸ್ಥರು ಬಗರ್ ಹುಕುಂ ಯೋಜನೆಯಡಿ ಅರ್ಜಿ ಸಲ್ಲಿಸಿ ಸಾಗುವಳಿ ಕೈಗೊಂಡಿದ್ದಾರೆ. ಊರಿನ ಪಕ್ಕ ಇನ್ನು ಎರಡು ಎಕರೆ ಗೋಮಾಳ ಖಾಲಿ ಉಳಿದಿದೆ. ಈ ಜಾಗವನ್ನು ಕೆಲವರು ಅತಿಕ್ರಮಿಸಲು ಮುಂದಾಗಿರುವುದು ಸರಿಯಲ್ಲ. ಈ ಜಾಗವನ್ನು ಊರಿನ ಅಭಿವೃದ್ಧಿ ಕಾರ್ಯಗಳಿಗೆ ಕಾಯ್ದಿರಿಸಬೇಕು ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.




ಗೋಮಾಳದಲ್ಲಿ ನಿರ್ಮಿಸಿಕೊಂಡಿದ್ದ ಶೆಡ್ ಗಳನ್ನು ಕಂದಾಯ ಇಲಾಖೆ ಈಗಾಗಲೇ ತೆರವುಗೊಳಿಸಿದೆ. ಮತ್ತೆ ಈ ಜಾಗದಲ್ಲಿ ಅತಿಕ್ರಮ ಆಗದಂತೆ ತಾಲೂಕು ಆಡಳಿತ ನಿಗಾ ವಹಿಸಬೇಕು ಎಂದು ಮನವಿ ಮಾಡಿದರು.

ಮುಖಂಡ ಅಬ್ದುಲ್ ಗಫಾರ್ ಸಾಬ್ ಮಾತನಾಡಿ, ಈಗಾಗಲೇ ಊರಿನ ಕೆಲವರು ಗೋಮಾಳದ ಜಾಗದಲ್ಲಿ ಮನೆ ನಿರ್ಮಿಸಿಕೊಂಡಿದ್ದಾರೆ. ಉಳಿದಿರುವ ಎರಡು ಎಕರೆ ಜಾಗವನ್ನು ಉಳಿಸಿಕೊಳ್ಳಬೇಕಿದೆ. ಬಡವರನ್ನು ಗುರುತಿಸಿ ಬೇರೆ ಕಡೆ ನಿವೇಶನ ಒದಗಿಸುವುದಾಗಿ ಶಾಸಕರು ಊರಿನಲ್ಲಿ ಇತ್ತೀಚೆಗೆ ಶಾಂತಿಸಭೆ ನಡೆಸಿ ಭರವಸೆ ನೀಡಿದ್ದಾರೆ ಎಂದರು.

ಗ್ರಾಪಂ ಉಪಾಧ್ಯಕ್ಷ ನಜೀರ್ ಸಾಬ್, ಮುಖಂಡರಾದ ತೇಜೇಶ್ವರ, ವೀರಪ್ಪ, ಮಹೇಶ್ ಗೋಷ್ಠಿಯಲ್ಲಿದ್ದರು.

## ಸಮತೋಲಿತ ಆಹಾರ ಸೇವನೆ ಆರೋಗ್ಯದ ಗುಟ್ಟು




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ವ್ಯಕ್ತಿಯ ಆರೋಗ್ಯ ಸಮತೋಲಿತ ಆಹಾರ ಮತ್ತು ಉತ್ತಮ ಆಲೋಚನೆಯಲ್ಲಿ ಅಡಗಿರುತ್ತದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಿಸಾರ್ ಫಾತಿಮ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಯುವ ರೆಡ್ ಕ್ರಾಸ್ ಘಟಕ, ರೆಡ್ ರಿಬ್ಬನ್ ಕ್ಲಬ್ ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿ ಕಚೇರಿ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ವಿಶ್ವ ಆರೋಗ್ಯ ದಿನಾಚರಣೆ ಅಂಗವಾಗಿ ಆರೋಗ್ಯಕರ ಜೀವನಶೈಲಿ ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು.

ಆರೋಗ್ಯವೆಂಬುದು ಪ್ರಪಂಚದಲ್ಲೆ ಅತ್ಯಂತ ಸುಂದರವಾದ ವಸ್ತು. ಅದಕ್ಕಿಂತ ಹೆಚ್ಚು ಯಾವುದೂ ಇಲ್ಲ. ಉತ್ತಮ ಆರೋಗ್ಯ, ಉತ್ತಮ ಶಿಕ್ಷಣ, ಕುಟುಂಬದಿಂದ ದೊರಕುವ ಪ್ರೀತಿ, ಸಮಾಜದಿಂದ ಗೌರವ ಪಡೆಯಲು ಸದಾ ಯತ್ನಿಸುತ್ತಿರಬೇಕು. ಸಮಾಜದಲ್ಲಿ ಮಹಿಳೆಯರು ಮತ್ತು ಪುರುಷರಿಗೆ ಸಮಾನ ಹಕ್ಕುಗಳಿವೆ. ಹೆಣ್ಣು ಮಕ್ಕಳು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಜಿ.ಎಸ್. ಸತೀಶ್ ಮಾತನಾಡಿ, ಇಂದು ಜೀವನಶೈಲಿ ಬದಲಾಗುತ್ತಿದೆ. ಪೌಷ್ಟಿಕ ಆಹಾರ ಸೇವನೆ, ನಿಯಮಿತ ವ್ಯಾಯಾಮ, ಸ್ವಚ್ಛ ಪರಿಸರ, ವೈಯಕ್ತಿಕ ಸ್ವಚ್ಛತೆ, ನಿದ್ರೆ, ಒತ್ತಡ ನಿರ್ವಹಣೆ ಮೊದಲಾದವುಗಳ ಮೂಲಕ ಆರೋಗ್ಯಕರ ಜೀವನ ಶೈಲಿಯನ್ನು ಬಲಪಡಿಸಬಹುದು. ಸದೃಢ ದೇಹದಲ್ಲಿ ಸದೃಢ ಮನಸ್ಸಿರುತ್ತದೆ. ಬೇಕರಿ, ಜಂಕ್ ಮತ್ತು ಫಾಸ್ಟ್ ಫುಡ್‌ಗಳಿಂದ ದೂರವಿರಿ, ಮಾಂಸಹಾರವನ್ನು ಹಿತ ಮಿತವಾಗಿ ಸೇವಿಸಿ. ಉನ್ಮಾದ ತರುವ ಮಾದಕ ವಸ್ತುಗಳಗೆ ಹೆಚ್ಚಾಗಿ ಹದಿಹರೆಯದ ಮಕ್ಕಳು ಬಲಿಯಾಗುತ್ತಿರುವುದು ದುರದೃಷ್ಟಕರ. ಅವುಗಳ ಸೇವನೆಯಿಂದ ದೂರವಿರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಟಿ.ಪಿ. ಪುಟ್ಟರಾಜು ಮಾತನಾಡಿ, ಆರೋಗ್ಯಕ್ಕಾಗಿ ಒಟ್ಟಾಗಿ, ವಿಜ್ಞಾನದ ಜೊತೆ ನಿಲ್ಲಿ ಎಂಬುದು ಈ ವರ್ಷದ ವಿಶ್ವ ಆರೋಗ್ಯ ದಿನಾಚರಣೆ ಧ್ಯೇಯವಾಕ್ಯವಾಗಿದ್ದು, ಎಲ್ಲರೂ ಸಾಕಾರಗೊಳಿಸಬೇಕು ಎಂದರು.

ಆರೋಗ್ಯ ನಿರೀಕ್ಷಣಾಧಿಕಾರಿ ಮೋಹನ್, ಮಂಜುನಾಥಸ್ವಾಮಿ, ಸಹ ಪ್ರಾಧ್ಯಾಪಕ ಕೆ.ಎನ್. ರಮೇಶ್, ಡಾ. ಪಿ.ಕೆ. ರಾಘವೇಂದ್ರ, ಜೆ.ಜಿ. ನಟರಾಜ್, ಟಿ.ಕೆ. ಸರಿತಾ, ಸೌಮ್ಯ ಉಪಸ್ಥಿತರದ್ದರು.

## ಜಿಲ್ಲಾ ಕಾರಾಗೃಹ ಖೈದಿಗಳೊಂದಿಗೆ ಡಿಸಿ ಸಮಾಲೋಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಜಿಲ್ಲಾ ಕಾರಾಗೃಹಕ್ಕೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಭೇಟಿ ನೀಡಿ ಖೈದಿಗಳೊಂದಿಗೆ ಸಮಾಲೋಚನೆ ನಡೆಸಿದರು.

ರೋಟರಿ ಕ್ಲಬ್ ಆಫ್ ಹಾಸನ ಸನ್ ರೈಸರ್ಸ್‌ನಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮ ಅಂಗವಾಗಿ ತೆರಳಿದ್ದ ಅವರು ಅಡುಗೆ ಕೋಣೆಗೆ ತೆರಳಿ ಊಟದ ಮೆನು ಪರಿಶೀಲಿಸಿದರು. ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ನೋಡಿ ಖೈದಿಗಳು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕೆಂದ ಅವರು, ಜೈಲುವಾಸಿಗಳ ಕಷ್ಟಸುಖ ಅರಿತರು.

ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಹೆತ್ತ ತಂದೆ-ತಾಯಿ ಶಾಪ ಹಾಕುವ ಅಥವಾ ಕಣ್ಣೀರು ಸುರಿಸುವ ಕೆಲಸವನ್ನು ಮಕ್ಕಳು ಮಾಡಬಾರದು ಎಂದು ಹೇಳಿದರು.



ಪೋಷಕರು ತಮ್ಮ ಮಕ್ಕಳು ಕೆಟ್ಟವರಾಗಲಿ ಎಂದು ಬಯಸುವುದಿಲ್ಲ. ಕೆಲವು ಸಲ ಸರಿಯಾದ ಮಾರ್ಗದಲ್ಲಿ ಬೆಳೆಸದೆ ಇರುವುದು ಜೈಲುಪಾಲಾಗಲು ಕಾರಣವಾಗುತ್ತದೆ. ಜೈಲುವಾಸಿಗಳು ಇನ್ನಾದರೂ ಒಳ್ಳೆಯ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸಬೇಕು. ಇಲ್ಲಿ ಸಮಯ ವ್ಯರ್ಥ ಮಾಡದೆ ದಿನಪತ್ರಿಕೆ, ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ತಪ್ಪು ಮಾಡಿದ ಮಾತ್ರಕ್ಕೆ ಜೀವನ ಮುಗಿಯಿತು ಎಂದು ಭಾವಿಸದೆ ಸರಿಯಾದ ದಾರಿಯಲ್ಲಿ ಸಾಗುವ ಮೂಲಕ ಒಳ್ಳೆಯ ಬದುಕು ಕಟ್ಟಿಕೊಳ್ಳಬೇಕು. ಆ ಕ್ಷಣದ ಕೋಪ, ಅಜ್ಞಾನ ಮನುಷ್ಯನನ್ನು ಅಪರಾಧಿಯಾಗಿಸುತ್ತದೆ. ಚಿಕ್ಕ ವಯಸ್ಸಿಗೆ ಜೈಲಿನಲ್ಲಿರುವುದು ದೊಡ್ಡ ದುರಂತ. ತಪ್ಪು ಮಾಡಿದ ವ್ಯಕ್ತಿಗೆ ತಿದ್ದಿಕೊಳ್ಳಲು ಅವಕಾಶ ಸಿಗುತ್ತದೆ ಎಂದರು.

ಜೈಲಿನಿಂದ ಬಿಡುಗಡೆಯಾದ ಬಳಿಕ ಹೊಸ ಬದುಕು ಕಟ್ಟಿಕೊಳ್ಳಲು ಅವಕಾಶಗಳಿವೆ. ಖೈದಿಗಳಿಗೆ ವೃತ್ತಿ ಕೌಶಲ್ಯ ತರಬೇತಿ ನೀಡುವಂತೆ ಈಗಾಗಲೇ ಅಧಿಕಾರಿಗಳಿಗೆ ಹೇಳಲಾಗಿದೆ. ಆಕಾಶವಾಣಿ ಪ್ರಸಾರಕ್ಕೆ ಈ ಹಿಂದೆಯೇ ಸೂಚಿಸಿದ್ದೆ. ಜೊತೆಗೆ ಹಸಿರು ಹಾಸನ ಪರಿಕಲ್ಪನೆಯಡಿ ಸಸಿಗಳ ಬೆಳೆಸುತ್ತಿರುವುದು ಶ್ಲಾಘನೀಯವಾಗಿದೆ ಎಂದು ಹೇಳಿದರು.

ಕಳ್ಳತನ, ಹೊಡೆದಾಟ, ಕ್ಷುಲ್ಲಕ ಕಾರಣಕ್ಕೆ ಜಗಳ ಮುಂತಾದ ಕಾರಣಕ್ಕೆ ಇನ್ನು 25 ರಿಂದ 30 ವರ್ಷದವರು ಜೈಲಿನಲ್ಲಿದ್ದೀರಿ. ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡಲು ಇದೊಂದು ಸಣ್ಣ ಶಿಕ್ಷೆ ಎಂದು ಭಾವಿಸಬೇಕು. ಯಾರೂ ಕೂಡ ಮಾನಸಿಕವಾಗಿ ಕುಗ್ಗದೆ ಆತ್ಮಸ್ಥೈರ್ಯದಿಂದ ಇರಬೇಕೆಂದರು.

ಕಾರಾಗೃಹ ಅಧೀಕ್ಷಕ ಆರ್.ಪ್ರಸನ್ನ, ಆಕಾಶವಾಣಿಯ ಮಧುಸೂದನ್, ರೋಟರಿ ಕ್ಲಬ್ ಆಫ್ ಹಾಸನ ಸನ್‌ರೈಸರ್ಸ್ ಅಧ್ಯಕ್ಷ ಮಂಜುನಾಥ್, ಪತ್ರಕರ್ತ ಬಿ.ಆರ್. ಉದಯಕುಮಾರ್ ಹಾಜರಿದ್ದರು.

## ಜನಗಣತಿ ಸಿಬ್ಬಂದಿಗೆ ವಿಶೇಷ ತರಬೇತಿ ಕಾರ್ಯಾಗಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಜಾತಿ ಜನಗಣತಿಯನ್ನು ತಾಲೂಕಿನಲ್ಲಿ ಯಶಸ್ವಿಯಾಗಿ ನಡೆಸುವ ಉದ್ದೇಶದಿಂದ ಪಟ್ಟಣದ ಸಂತ ಜೋಸೆಫರ ಶಾಲೆಯಲ್ಲಿ ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ವಿಶೇಷ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಸುದ್ದಿಗಾರರೊಂದಿಗೆ ಮಾತನಾಡಿದ ಗ್ರೇಡ್-2 ತಹಶೀಲ್ದಾರ್ ಜನಾರ್ಧನ್ ಅವರು, ಜಾತಿ ಜನಗಣತಿ ಪ್ರಕ್ರಿಯೆಯು ಸಮಗ್ರ ಮತ್ತು ನಿಖರವಾಗಿರಬೇಕು. ಪ್ರತಿಯೊಬ್ಬ ನಾಗರಿಕರ ಮಾಹಿತಿಯನ್ನು ಸರಿಯಾದ



ರೀತಿಯಲ್ಲಿ ದಾಖಲಿಸುವುದು ಅತ್ಯಂತ ಪ್ರಮುಖವಾಗಿದ್ದು, ಯಾವುದೇ ತಪ್ಪುಗಳಿಗೆ ಅವಕಾಶ ನೀಡಬಾರದು ಎಂದು ಸೂಚಿಸಿದರು.

ಜನಗಣತಿ ಮಾಹಿತಿಗಳು ಸರ್ಕಾರದ ಭವಿಷ್ಯದ ಯೋಜನೆಗಳಿಗೆ ಮಾರ್ಗದರ್ಶಿಯಾಗುವುದರಿಂದ ಗಣತಿದಾರರು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕು ಎಂದು ಅವರು ತಿಳಿಸಿದರು.

ತರಬೇತಿ ಕಾರ್ಯಾಗಾರದಲ್ಲಿ ಗಣತಿದಾರರಿಗೆ ಮನೆ ಮನೆಗೆ ಭೇಟಿ ನೀಡುವ ವಿಧಾನ, ಮಾಹಿತಿ ಸಂಗ್ರಹಿಸುವ ಕ್ರಮ, ಡಿಜಿಟಲ್ ಸಾಧನಗಳ ಬಳಕೆ ಮತ್ತು ಸಾರ್ವಜನಿಕರೊಂದಿಗೆ ನಡೆಸಬೇಕಾದ ಸಂವಹನದ ಕುರಿತು ವಿವರವಾಗಿ ತಿಳಿಸಲಾಯಿತು. ಜೊತೆಗೆ, ಜನಗಣತಿ ವೇಳೆ ಎದುರಾಗುವ ಸವಾಲುಗಳು ಹಾಗೂ ಅವುಗಳನ್ನು ಸಮರ್ಥವಾಗಿ ನಿಭಾಯಿಸುವ ಕುರಿತು ಮಾರ್ಗದರ್ಶನ ನೀಡಲಾಗಿದೆ ಎಂದು ತಿಳಿಸಿದರು.

ತಾಲೂಕು ಮಟ್ಟದ ಅಧಿಕಾರಿಗಳು, ಶಾಲಾ ಆಡಳಿತ ಮಂಡಳಿ ಸದಸ್ಯರು ಹಾಗೂ ಗಣತಿದಾರರು ಉಪಸ್ಥಿತರಿದ್ದರು.

## ದಿಂಡಗೂರು ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ದಿಂಡಗೂರು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಶೆಟ್ಟಿಹಳ್ಳಿ ರಾಮಚಂದ್ರ ಅವಿರೋಧ ಆಯ್ಕೆಯಾಗಿದ್ದಾರೆ.

ದಿಂಡಗೂರು ಚೇತನ್ ಅವರು ರಾಜೀನಾಮೆ ನೀಡಿದ್ದ ಸ್ಥಾನಕ್ಕೆ ಚುನಾವಣೆ ನಡೆದಿದ್ದು ಅವಿರೋಧವಾಗಿ ರಾಮಚಂದ್ರ ಅವರನ್ನು ಆಯ್ಕೆ ಮಾಡಲಾಯಿತು.

ರಾಮಚಂದ್ರು ಅವರನ್ನು ಅಭಿನಂದಿಸಿ ಮಾತನಾಡಿದ ಶಾಸಕ ಸಿ.ಎನ್ .ಬಾಲಕೃಷ್ಣ ಅವರು, ಇದುವರೆಗೆ ದಿಂಡಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ರಾಮಚಂದ್ರು ಹೆಚ್ಚಿನ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಅವರ ಸೇವೆಯನ್ನ ಗುರುತಿಸಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಕೆಲಸ ಮಾಡಿಕೊಂಡು ಹೋಗುವಂತೆ ತಿಳಿಸಿದರು.

ಶೆಟ್ಟಿಹಳ್ಳಿ ಗ್ರಾಮಸ್ಥರು ಹಾಗೂ ದಿಂಡಗೂರು ಪಂಚಾಯಿತಿ ವ್ಯಾಪ್ತಿಯ ಮುಖಂಡರು ಭಾಗವಹಿಸಿದ್ದರು.

## ಸಂಭ್ರಮದ ಕುದರಂಗಿ ವೀರಭದ್ರಸ್ವಾಮಿ ರಥೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಕುದರಂಗಿ ಶ್ರೀ ವೀರಭದ್ರೇಶ್ವರಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಪುಷ್ಪ ಹಾಗೂ ಬ್ರಹ್ಮ ರಥೋತ್ಸ ಅದ್ದೂರಿಯಾಗಿ ನೆರವೇರಿತು.

ಜಿಲ್ಲೆಯಷ್ಟೇ ಅಲ್ಲದೆ, ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಜನರು ಭಾಗವಹಿಸಿದ್ದರು. ಸೋಮವಾರದಿಂದ ಆರಂಭವಾದ ಜಾತ್ರಾ ಮಹೋತ್ಸ ವದ ಮೊದಲ ದಿನ ರುದ್ರಾಭಿಷೇಕ, ಹೋಮ-ಹವನ ಹಾಗೂ ರಥಗಳಿಗೆ ಕಳಶಾರೋಹಣ ಕಾರ್ಯಕ್ರಮಗಳು ನಡೆದವು.


ಮಂಗಳವಾರ ಬೆಳಗಿನ ಜಾವದಿಂದಲೇ ದೇವಸ್ಥಾನದಲ್ಲಿ ಪೂಜಾ ವಿಧಿವಿಧಾನಗಳು ಆರಂಭಗೊಂಡವು. ಮಹಾಮಂಗಳಾರತಿ, ಉತ್ಸವ ಮೂರ್ತಿಗಳಿಗೆ ವಿಶೇಷ ಅಲಂಕಾರ ಹಾಗೂ ದೇವಸ್ಥಾನದ ಪ್ರದಕ್ಷಿಣೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಭಕ್ತಿಭಾವದಿಂದ ಜರುಗಿದವು. ಬೆಳಿಗ್ಗೆ 9 ಗಂಟೆ ಸುಮಾರಿಗೆ ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಭದ್ರಕಾಳಿ ದೇವಿಯ ಉತ್ಸ ವ ಮೂರ್ತಿಗಳನ್ನು ಪುಷ್ಪರಥದಲ್ಲಿ ಪ್ರತಿಷ್ಠಾಪಿಸಿ, ಭಕ್ತರ ಜಯಘೋಷಗಳ ನಡುವೆ ರಥವನ್ನು ಎಳೆಯುವ ದೃಶ್ಯ ಮನಮೋಹಕವಾಗಿತ್ತು.



ಬಳಿಕ ಬೆಳಿಗ್ಗೆ 11 ಗಂಟೆಗೆ ರಾಜ್ಯೋತ್ಸವ, ಕಲ್ಯಾಣ ಮಹೋತ್ಸವ ಹಾಗೂ ಬಲಿಪೂಜೆ ನಡೆದವು. ಮಧ್ಯಾಹ್ನ 1 ಗಂಟೆಗೆ ನಡೆದ ಬ್ರಹ್ಮರಥೋತ್ಸ ವವು ಜಾತ್ರೆಯ ಪ್ರಮುಖ ಆಕರ್ಷಣೆಯಾಗಿದ್ದು, ಭಕ್ತರು ರಥವನ್ನು ಎಳೆದು ತಮ್ಮ ಭಕ್ತಿಯನ್ನು ಸಮರ್ಪಿಸಿದರು. ಈ ವೇಳೆ ಮೊಳಗಿದ ಜಯಘೋಷಗಳ ನಡುವೆ, ಭಕ್ತರು ರಥದ ಮೇಲೆ ಬಾಳೆಹಣ್ಣುಗಳನ್ನು ಎಸೆದು ಹರಕೆ ತೀರಿಸಿದರು.

ಜಾತ್ರೆಗೆ ಆಗಮಿಸಿದ ಭಕ್ತರಿಗೆ ದೇವಸ್ಥಾನದ ಆಡಳಿತ ಮಂಡಳಿಯಿಂದ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ದಿನಪೂರ್ತಿ ಸಾವಿರಾರು ಭಕ್ತರು ಪ್ರಸಾದ ಸ್ವೀಕರಿಸಿದರು. ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸುವ ಹಿನ್ನೆಲೆಯಲ್ಲಿ ಕೆಎಸ್ ಆರ್‌ಟಿಸಿಯಿಂದ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಲಾಗಿತ್ತು.

## ಸರ್ವೆ ನೌಕರರ ಸಮಸ್ಯೆ ಬಗೆಹರಿಸಲು ರೈತರ ಆಗ್ರಹ




ಚನ್ನರಾಯಪಟ್ಟಣ: ಸರ್ವೆ ಇಲಾಖೆ ನೌಕರರು ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವುದರಿಂದ ರೈತರ ಜಮೀನಿನ ಅಳತೆಯ ಕೆಲಸ ಆಗುತ್ತಿಲ್ಲ. ಕೂಡಲೇ ಸರ್ಕಾರ ಅದನ್ನು ಬಗೆಹರಿಸಬೇಕೆಂದು ರೈತ ಸಂಘದ ರಾಜ್ಯಾಧ್ಯಕ್ಷ ಅರಳಾಪುರ ಮಂಜೇಗೌಡ ಒತ್ತಾಯಿಸಿದರು.

ಸುದ್ದಿಗೋಷ್ಟಿಯಲ್ಲಿ ಮಂಗಳವಾರ ಮಾತನಾಡಿ, ಕಳೆದ ಆರು ತಿಂಗಳಿನಿಂದಲೂ ಸರ್ವೆ ಕೆಲಸ ನೆನೆಗುದಿಗೆ ಬಿದ್ದಿದೆ. ರೈತರಿಂದ ಹಣ ಕೂಡ ಕಟ್ಟಿಸಿಕೊಂಡಿದ್ದು ಮೂರು ತಿಂಗಳ ಒಳಗೆ ಅಳತೆ ಮಾಡದಿದ್ದಲ್ಲಿ ಆ ಹಣ ವ್ಯರ್ಥವಾಗುತ್ತದೆ. ರೈತರ ಕಷ್ಟವನ್ನು ಕೇಳುವವರಿಲ್ಲದಂತೆ ಆಗಿದೆ. ಅಧಿಕಾರಿಗಳು ಮಾಡುವ ತಪ್ಪಿನಿಂದ ಪಹಣಿ ತಿದ್ದುಪಡಿ ಮಾಡಲು ಹೋಗಿ ಸರಿಪಡಿಸುವ ಬದಲು ತಪ್ಪು ಮಾಡುತ್ತಿದ್ದಾರೆ. ಮೂರು ಮತ್ತು ಒಂಬತ್ತು ಕಾಲಂ ಪಹಣಿಯಲ್ಲಿ ತಾಳೆ ಮಾಡುವಾಗ ತಪ್ಪು ಎಸಗುತ್ತಿದ್ದಾರೆ. ತಾಲ್ಲೂಕಿನ 15ಕ್ಕೂ ಹೆಚ್ಚು ಗ್ರಾಮಗಳಲ್ಲಿ ಕಂದಾಯ ಇಲಾಖೆಯ ಜಿಪಿಎಸ್ ಮ್ಯಾಪ್ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ. ಅದರಿಂದ ರೈತರು ಬೆಳೆ ಪರಿಹಾರ, ನೆಫೆಡ್ ಮೂಲಕ ಖರೀದಿಸುವ ಬೆಂಬಲ ಬೆಲೆಯನ್ನು ಪಡೆಯಲಾಗುತ್ತಿಲ್ಲ. ಸರ್ಕಾರ ಕೂಡಲೇ ಇದನ್ನು ಸರಿಪಡಿಸಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಟಿಯಲ್ಲಿ ಜೋಗಿಪುರ ಪ್ರಕಾಶ್, ಗಿರೀಶ್, ಪ್ರೇಮ್ ಕುಮಾರಿ, ರೇವಣ್ಣ, ಹರೀಶ್ ಉಪಸ್ಥಿತರಿದ್ದರು.

# ಅರಸೀಕೆರೆ ಬಸ್ ನಿಲ್ದಾಣ ಸ್ಥಳಾಂತರ

## ಪ್ರಯಾಣಿಕರು ಹೈರಾಣ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಹೊಸ ಬಸ್ ನಿಲ್ದಾಣ ಕಾಮಗಾರಿ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸ್ಥಳಾಂತರವಾಗಿರುವ ನಿಲ್ದಾಣ ಅವ್ಯವಸ್ಥೆಯ ಆಗರವಾಗಿದ್ದು ಸಾರ್ವಜನಿಕರ ಗೋಳು ಕೇಳುವವರು ಯಾರೂ ಇಲ್ಲವಾಗಿದ್ದಾರೆ.

35 ಕೋಟಿ ರೂ. ವೆಚ್ಚದಲ್ಲಿ ಹೈಟೆಕ್ ಬಸ್ ನಿಲ್ದಾಣ ನಿರ್ಮಾಣವಾಗುತ್ತಿರುವುದು ಒಳ್ಳೆಯ ಬೆಳವಣಿಗೆ. ಆದರೂ ಅಭಿವೃದ್ಧಿ ಹೆಸರಿನಲ್ಲಿ ಪ್ರಯಾಣಿಕರು ಹಾಗೂ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗೆ ಪರಿಹಾರ ದೊರಕಿಸಿ ಕೊಡುವವರು ಯಾರು ಎಂಬ ಪ್ರಶ್ನೆ ಉದ್ಭವವಾಗಿದೆ.


ನೂತನ ಬಸ್ ನಿಲ್ದಾಣದ ಕಾಮಗಾರಿಯೇನೋ ಆರಂಭವಾಗಿದೆ. ಆದರೆ ಸಾರಿಗೆ ಸಂಸ್ಥೆಯ ಬಸ್ ಡಿಪೋ ಪಕ್ಕ ಸ್ಥಳಾಂತರಿಸುವ ಮುನ್ನ ಪ್ರಯಾಣಿಕರ ಹಿತವನ್ನು ಪರಿಗಣಿಸಬೇಕಿತ್ತು. ಸ್ಥಳಾಂತರಗೊಂಡಿರುವ ಬಸ್ ನಿಲ್ದಾಣದಲ್ಲಿ ಸಮರ್ಪಕವಾಗಿ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಇಲ್ಲ. ನಿರಂತರವಾಗಿ ಬಸ್‌ಗಳು ನಿಲ್ದಾಣಕ್ಕೆ ಬಂದು ಹೋಗುವುದರಿಂದ ನಿಲ್ದಾಣದ ಆವರಣ ಸದಾ ಧೂಳಿನಿಂದ ತುಂಬಿರುತ್ತದೆ ಎಂಬುದು ಪ್ರಯಾಣಿಕರ ದೂರಾಗಿದೆ. ಇತ್ತ ಹಳೆ ಬಸ್ ನಿಲ್ದಾಣದ ಬಳಿ ಬಸ್‌ಗಳು ಹೆದ್ದಾರಿಯಲ್ಲಿ ನಿಂತು ಪ್ರಯಾಣಿಕರನ್ನ ಹತ್ತಿಸಿಕೊಳ್ಳುವುದು ಹಾಗೂ ಇಳಿಸುತ್ತಿರುವುದರಿಂದ ಸಹಜವಾಗಿಯೇ ಸಹಸ್ರ ಸಂಖ್ಯೆಯಲ್ಲಿ ಬಸ್ ಪ್ರಯಾಣಿಕರು ಇಲ್ಲಿಯೇ ನಿಂತು ತಮ್ಮ ಪ್ರಯಾಣವನ್ನ ಬೆಳೆಸಬೇಕಾದ ಸ್ಥಿತಿ ಇದೆ. ರಸ್ತೆ ಬದಿಯಲ್ಲೇ ಬಿಸಿಲು ಮತ್ತು ಮಳೆಗೆ ಮೈಯೊಡ್ಡಿ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಹೆದ್ದಾರಿಯಲ್ಲಿ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುವ ಅಥವಾ ಇಳಿಸುವ ಸಂದರ್ಭದಲ್ಲಿ ಅಪಘಾತ ಸಂಭವಿಸಿದರೆ ಅಥವಾ ಬಿಸಿಲು ಮಳೆಯಿಂದ ರಕ್ಷಣೆ ಇಲ್ಲದೆ ಪ್ರಯಾಣಿಕರಿಗೆ ಸಾವು ನೋವು ಸಂಭವಿಸಿದರೆ ಅದರ ಹೊಣೆಯನ್ನು ಯಾರು ಹೊರಬೇಕು ಎಂಬುದರ ಕುರಿತು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ಸಮರ್ಪಕ ಮೂಲಭೂತ ವ್ಯವಸ್ಥೆ ಕಲ್ಪಿಸುವವರೆಗೆ ನಗರದ ಕೃಷಿ ಉತ್ಪನ್ನ ಮಾರುಕಟ್ಟೆಯ ಆವರಣದ ಒಂದು ಬದಿಯ ಪ್ರದೇಶವನ್ನು ಬಸ್ ಸಂಚಾರಕ್ಕೆ ಬಳಸಿಕೊಂಡರೆ ಪ್ರಯಾಣಿಕರಿಗೆ ಬಿಸಿಲು ಮಳೆಯಿಂದ ರಕ್ಷಣೆ ಸಿಗುವ ಜೊತೆಗೆ ಹೆದ್ದಾರಿಯಲ್ಲಿ ಬಸ್‌ಗಾಗಿ ಕಾಯುವುದನ್ನು ತಪ್ಪಿಸಬಹುದು. ಈ ನಿಟ್ಟಿನಲ್ಲಿ ಕ್ಷೇತ್ರ, ಶಾಸಕರು ಮತ್ತು ಅಧಿಕಾರಿಗಳು ಗಮನ ಹರಿಸಲಿ ಎಂದು ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಆಗ್ರಹಿಸಿದ್ದಾರೆ.

> **ತರಾತುರಿಯಲ್ಲಿ ಬಸ್ ನಿಲ್ದಾಣವನ್ನು ಸ್ಥಳಾಂತರಿಸಿದ ಶಾಸಕರು ಹಾಗೂ ಸಾರಿಗೆ ಇಲಾಖೆ ಅಧಿಕಾರಿಗಳು ತಾತ್ಕಾಲಿಕ ನಿಲ್ದಾಣದಲ್ಲಿ ಕನಿಷ್ಟ ಮೂಲಸೌಕರ್ಯಕ್ಕೆ ಆದ್ಯತೆ ನೀಡಬೇಕಿತ್ತು. ಇಲಾಖೆ ಅಧಿಕಾರಿಗಳ ಈ ಬೇಜವಾಬ್ದಾರಿ ನಡೆಯಿಂದ ಪ್ರಯಾಣಿಕರಿಗೆ ಭಾರೀ ತೊಂದರೆಯಾಗುತ್ತಿದೆ.**
>
> **– ವಿವೇಕ್, ಜೆಡಿಎಸ್ ಮುಖಂಡ**

## ಶಾಸಕ ಸಿ.ಎನ್.ಬಾಲಕೃಷ್ಣ ಅವರ 57ನೇ ಹುಟ್ಟುಹಬ್ಬ ಆಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಭೂಮಿ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಶಾಸಕ ಸಿ. ಎನ್. ಬಾಲಕೃಷ್ಣ ಅವರ 57ನೇ ವರ್ಷದ ಹುಟ್ಟುಹಬ್ಬವನ್ನ ಆಚರಿಸಲಾಯಿತು.

ಭೂಮಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಂಕರಲಿಂಗೇಗೌಡ ಮಾತನಾಡಿ, ಶಾಸಕ ಸಿ.ಎನ್. ಬಾಲಕೃಷ್ಣ ಅವರ ಹುಟ್ಟುಹಬ್ಬವನ್ನ ಅರ್ಥಪೂರ್ಣವಾಗಿ ಆಚರಿಸುತ್ತಿದ್ದು ಅವರ ರಾಜಕೀಯ ಜೀವನ ಹೀಗೆ ಸುಗಮವಾಗಿ ನಡೆಯಲಿ ಹಾಗೂ ಬಡವರ ದೀನ ದಲಿತರ ನೋವು ನಲಿವಿಗೆ ಸ್ಪಂದಿಸುವಂತ ಶಾಸಕರಿಗೆ ಇನ್ನು ಹೆಚ್ಚು ಆರೋಗ್ಯ ಐಶ್ವರ್ಯ ಅಧಿಕಾರ ದೊರೆಯಲಿ ಎಂದು ಹಾರೈಸುತ್ತೇವೆ ಎಂದರು.

ಭೂಮಿ ಕ್ಷೇಮಾಭಿವೃದ್ಧಿ ಸಂಘವು ಹಲವು ವರ್ಷಗಳಿಂದ ಸಾಮಾಜಿಕ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದು ನೊಂದವರ ಧನಿಯಾಗಿ ಕೆಲಸ ನಿರ್ವಹಿಸುತ್ತಿದೆ. ಆದರೆ ನಮ್ಮ ಸಂಘಕ್ಕೆ ಸ್ವಂತ ನಿವೇಶನ ಇಲ್ಲದಿರುವುದು ಬೇಸರದ ಸಂಗತಿ. ಆದ್ದರಿಂದ ಶಾಸಕರು ಸಂಘಕ್ಕೆ ಒಂದು ನಿವೇಶನವನ್ನು ನೀಡಬೇಕೆಂದು ಮನವಿ ಮಾಡಿದರು.

## ಮಕ್ಕಳ ಕಳ್ಳ ಸಾಗಾಣಿಕೆ ತಡೆಗೆ ಎಲ್ಲರ ಪ್ರಯತ್ನ ಇರಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ದೇಶದಲ್ಲಿ ದಿನ ನಿತ್ಯ ಮಕ್ಕಳ ಕಳ್ಳ ಸಾಗಾಣಿಕೆ ಹೆಚ್ಚಾಗುತ್ತಿದ್ದು, ತಡೆಗಟ್ಟುವ ಕೆಲಸ ಪ್ರತಿಯೊಬ್ಬ ನಾಗರಿಕರಿಂದ ಆಗಬೇಕಿದೆ ಎಂದು ಎಂ.ಜಿ. ರಸ್ತೆ ಮಹಿಳಾ ಕಾಲೇಜಿನ ಸಮಾಜಶಾಸ್ತ್ರ ಸಹ ಪ್ರಾಧ್ಯಾಪಕ ಡಾ. ಕೆ. ಭಾಷಾ ಹೇಳಿದರು.

ನಗರದ ಆರ್‌ಸಿ ರಸ್ತೆ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ ಘಟಕ ಹಾಗೂ ಸಮಾಜಶಾಸ್ತ್ರ ವಿಭಾಗದಿಂದ ಮಂಗಳವಾರ ಹಮ್ಮಿಕೊಂಡಿದ್ದ ಮಕ್ಕಳು ಮತ್ತು ಕಳ್ಳಸಾಗಣೆ ಎಂಬ ವಿಷಯದ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ದಿನಕ್ಕೆ 20 ರಿಂದ 30 ಮಕ್ಕಳು ಕಾಣೆಯಾಗುತ್ತಿರುವ ಬಗ್ಗೆ ವರದಿಯಾಗುತ್ತಿದೆ. ಕಳ್ಳ ಸಾಗಾಣಿಕೆ ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದು ಸುಮಾರು 12 ಲಕ್ಷ ಕೋಟಿ ರೂ. ಅಕ್ರಮ ವ್ಯವಹಾರ ಇದರಿಂದ ನಡೆಯುತ್ತಿದೆ. ಮಕ್ಕಳನ್ನು ವಿವಿಧ ರೀತಿಯಲ್ಲಿ ದುರುಪಯೋಗ ಪಡಿಸಲಾಗುತ್ತಿದೆ. ವಿಶೇಷವಾಗಿ ಕಾಫಿ ತೋಟಗಳು ಕ್ರಷರ್‌ಗಳು ಇಟ್ಟಿಗೆ ಕಾರ್ಖಾನೆಗಳಲ್ಲಿ ಮಕ್ಕಳನ್ನು ಬಲವಂತವಾಗಿ ಕೆಲಸ ಮಾಡಿಸಲಾಗುತ್ತಿದೆ. ಕೆಲವು ಮಕ್ಕಳನ್ನು ಭಿಕ್ಷಾಟನೆಗೆ ತಳ್ಳಲಾಗುತ್ತದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಫೇಕ್ ಐಡಿ (ನಕಲಿ ಗುರುತು ಪತ್ರ) ಬಳಸಿ ವಂಚನೆ ಮಾಡಲಾಗುತ್ತಿದೆ. ಅದರಲ್ಲೂ ಈಗಿನ ಮಕ್ಕಳು ಮಾದಕ ವಸ್ತುವಿಗೆ ಬಲಿಯಾಗುತ್ತಿರುವುದು ಸಮಾಜಕ್ಕೆ ದೊಡ್ಡ ಅಪಾಯ. ಮಹಿಳೆಯರು ಯಾರ ಮೇಲೂ ಅವಲಂಬಿತರಾಗಬಾರದು, ಸ್ವಾವಲಂಬನೆಯಿಂದ ಬದುಕಬೇಕು ಶಿಕ್ಷಣ ಮತ್ತು ಕೌಶಲ್ಯಗಳಿಂದ ತಮ್ಮ ಬದುಕನ್ನು ತಾವೇ ಕಟ್ಟಿಕೊಳ್ಳಬೇಕು. ಮೊದಲಿಗೆ ನಮ್ಮನ್ನು ನಾವೇ ರಕ್ಷಣೆ ಮಾಡಿಕೊಳ್ಳಬೇಕು. ಅನಗತ್ಯವಾಗಿ ಅಲ್ಲಿ ಇಲ್ಲಿ ಹೋಗುವ ಹೋಗಬಾರದು ಎಂದು ತಮ್ಮ ವಿಶೇಷ ಉಪನ್ಯಾಸವನ್ನು ಮುಗಿಸಿದರು ಎಂದು ಹೇಳಿದರು.

ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಕ್ಕಳ ಕಳ್ಳ ಸಾಗಾಣಿಕೆ ಮತ್ತು ಅಂಗಾಂಗಗಳ ಅಕ್ರಮ ವ್ಯವಹಾರಗಳು ಹೆಚ್ಚಾಗುತ್ತಿರುವುದು ಆತಂಕಕಾರಿಯಾಗಿದೆ. ವಿಶೇಷವಾಗಿ ಮಹಾನಗರಗಳಲ್ಲಿ ಜನಸಂದಣಿ ಮತ್ತು ಅವಸರದ ಜೀವನದ ನಡುವೆ ಕೆಲವರು ಈ ರೀತಿಯ ಅಕ್ರಮ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಳ್ಳುತ್ತಿದ್ದಾರೆ. ಕೆಲವರು ಅಜ್ಞಾನ ಮತ್ತು ನಂಬಿಕೆಯನ್ನು ದುರುಪಯೋಗ ಪಡಿಸಿಕೊಂಡು ಮಕ್ಕಳನ್ನು ಹಾಗೂ ಸಾಮಾನ್ಯ ಜನರನ್ನು ತಪ್ಪು ಮಾರ್ಗಕ್ಕೆ ಕರೆದುಕೊಳ್ಳುತ್ತಾರೆ. ಇದು ಕೇವಲ ಕಾನೂನುಬಾಹಿರವಲ್ಲ ಮಾನವೀಯತೆಯ ವಿರುದ್ಧವಾಗಿದೆ. ಮಕ್ಕಳ ಸಾಗಾಣಿಕೆಯನ್ನು ತಪ್ಪಿಸಲು ಸಮಾಜದ ಪ್ರತಿಯೊಬ್ಬರು ಜವಾಬ್ದಾರರಾಗಬೇಕು. ಸುತ್ತಮುತ್ತ ಇರುವವರಿಗೆ ಜಾಗೃತಿ ಮೂಡಿಸಬೇಕು ಅನುಮಾನಾಸ್ಪಂದ ಚಟುವಟಿಕೆಗಳನ್ನು ಕಂಡರೆ ಮೌನವಾಗಿರಬಾರದು. ತಕ್ಷಣವೇ ಪೊಲೀಸ್ ಅಥವಾ ಸಂಬಂಧಿತ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಅದರ ಜೊತೆಗೆ ಸಮಾಜಕ್ಕೆ ಮಾಹಿತಿಯನ್ನು ನೀಡಬೇಕು ಎಂದರು.

ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ. ಆರ್. ಸುರೇಶ್ ಕುಮಾರ್, ಸಹ ಪ್ರಾಧ್ಯಾಪಕ ಎನ್.ವೆಂಕಟೇಶ್, ಐಕ್ಯೂಎಸಿ ಸಂಚಾಲಕ ಜಿ.ಆರ್. ಮೋಹನ್ ಕುಮಾರ್ ಇತರರಿದ್ದರು.

## ತ್ರಿವಿಧ ದಾಸೋಹ ಮೂಲಕ ಬೆಳಕಾದ ಶಿವಕುಮಾರ ಸ್ವಾಮೀಜಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ತ್ರಿವಿಧ ದಾಸೋಹದ ಮೂಲಕ ತುಮಕೂರಿನ ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಅನೇಕ ಮಕ್ಕಳ ಪಾಲಿಗೆ ಬೆಳಕಾಗಿದ್ದಾರೆ ಎಂದು ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ ತಿಳಿಸಿದರು.

ಶ್ರೀ ಮಠದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ಶ್ರೀಗಳ 119ನೇ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಸಿದ್ದಗಂಗಾ ಶ್ರೀಗಳು ನಡೆದಾಡುವ ದೇವರು ಎಂದೇ ಪ್ರಸಿದ್ಧರಾಗಿದ್ದರು. ಬಡ ಹಾಗೂ ಅನಾಥ ವಿದ್ಯಾರ್ಥಿಗಳ ಬದುಕಿಗೆ ಬೆಳಕಾಗಿದ್ದಾರೆ ಎಂದರು.

ಜಾತಿ-ಮತ ಭೇದವಿಲ್ಲದೆ ಎಲ್ಲಾ ವರ್ಗದ ಮಕ್ಕಳಿಗೆ ಉಚಿತ ಶಿಕ್ಷಣ, ವಸತಿ ಹಾಗೂ ಊಟ ಒದಗಿಸುವ ಮೂಲಕ ಅವರು ಮಾನವೀಯ ಮೌಲ್ಯಗಳನ್ನು ಜೀವಂತಗೊಳಿಸಿದ್ದಾರೆ. ಮಠದ ಆರ್ಥಿಕ ಸ್ಥಿತಿ ದುರ್ಬಲವಾಗಿದ್ದ ಸಮಯದಲ್ಲೂ ಶ್ರೀಗಳು ಅಚಲ ಧೈರ್ಯದಿಂದ ಕಾರ್ಯ ನಿರ್ವಹಿಸಿ, ಭಕ್ತರ ಮನೆ ಮನೆಗೆ ತೆರಳಿ ದವಸ-ಧಾನ್ಯ ಸಂಗ್ರಹಿಸಿ ವಿದ್ಯಾರ್ಥಿ ನಿಲಯ, ಪ್ರಸಾದ ನಿಲಯ ಮತ್ತು ಶಿಕ್ಷಣ ಸಂಸ್ಥೆಗಳನ್ನು ಯಶಸ್ವಿಯಾಗಿ ನಡೆಸಿದ್ದನ್ನು ನೆನಪಿಸಿಕೊಂಡರು.

ಗ್ರಾಮೀಣ ಭಾಗದ ಮಕ್ಕಳಿಗೆ ಶಿಕ್ಷಣದ ದೀಪ ಹಚ್ಚಿ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಶಿವಕುಮಾರ ಸ್ವಾಮೀಜಿ ಪಾತ್ರ ಮಹತ್ವದ್ದಾಗಿದೆ ಎಂದರು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಎನ್. ಕುಮಾರಸ್ವಾಮಿ ಮಾತನಾಡಿ, ಸಿದ್ದಗಂಗಾ ಶ್ರೀಗಳು ಬಡ, ದೀನ, ದಲಿತ ಹಾಗು ಹಿಂದುಳಿದ ವರ್ಗದ ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ ಸಮಾಜದಲ್ಲಿ ಸಮಾನತೆಯ ಸಂದೇಶ ಸಾರಿದರು. ಅವರ ಆದರ್ಶಗಳು ಇಂದಿನ ಯುವಜನತೆಗೆ ಮಾರ್ಗದರ್ಶಕವಾಗಿವೆ ಎಂದು ಹೇಳಿದರು.

ಪರಿಷತ್ ಪ್ರಧಾನ ಕಾರ್ಯದರ್ಶಿ ಕಟ್ಟಾಯ ಶಿವಕುಮಾರ ಮಾತನಾಡಿ, 12ನೇ ಶತಮಾನದ ಶಿವಶರಣರ ಕಾಯಕ ಮತ್ತು ದಾಸೋಹ ತತ್ವವನ್ನು ಆಧುನಿಕ ಕಾಲದಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಿದ ಮಹಾನ್ ವ್ಯಕ್ತಿತ್ವ ಸಿದ್ದಗಂಗಾ ಸ್ವಾಮೀಜಿ. ಅವರ ನಿಸ್ವಾರ್ಥ ಸೇವೆಗೆ ಇಡೀ ಜಗತ್ತೇ ತಲೆಬಾಗಿದ್ದು, ಇಂತಹ ಮಹಾನ್ ಗುರುಗಳ ಕಾಲದಲ್ಲಿ ಬದುಕಿರುವುದು ನಮ್ಮ ಸೌಭಾಗ್ಯ ಎಂದರು.

ಪರಿಷತ್ ಕೋಶಾಧಿಕಾರಿ ರುದ್ರಸ್ವಾಮಿ, ಸಂಘಟನಾ ಕಾರ್ಯದರ್ಶಿ ಆನಂದ್ ಪಟೇಲ್, ಬೇಲೂರು ತಾಲ್ಲೂಕು ಅಧ್ಯಕ್ಷ ಹೆಬ್ಬಾಳು ಹಾಲಪ್ಪ, ಅರಕಲಗೂಡು ಅಧ್ಯಕ್ಷ ಅಮೃತೇಶ್, ಚನ್ನರಾಯಪಟ್ಟಣದ ಕಲ್ಪನಾ ಸಿದ್ದುರಾಜು, ಬೇಲೂರು ಪ್ರಧಾನ ಕಾರ್ಯದರ್ಶಿ ರಾಜಕುಮಾರ, ಖಜಾಂಚಿ ಧನಂಜಯ, ಸಕಲೇಶಪುರ ಕದಳಿ ಮಹಿಳಾ ವೇದಿಕೆ ಮೀನಾಕ್ಷಿ ಖಾದರ್, ಶಾರದ ಗುರುಮೂರ್ತಿ, ಭಾವನಾ, ಕಲಾವತಿ, ಪೂಜಾ, ರತ್ನಮ್ಮ, ಅನ್ನಪೂರ್ಣ ಇದ್ದರು.

## ಹಳೆ ಕಾಮತಿಯಲ್ಲಿ ಬಸವೇಶ್ವರ-ವೀರಭದ್ರಸ್ವಾಮಿ ಜಾತ್ರೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ತಾಲೂಕಿನ ಹಳೆ ಕಾಮತಿ ಗ್ರಾಮದಲ್ಲಿ ಬಸವೇಶ್ವರ ಹಾಗೂ ವೀರಭದ್ರಸ್ವಾಮಿ ಜಾತ್ರಾ ಮಹೋತ್ಸವ ನೆರವೇರಿತು.

ಭಾನುವಾರ ಸಂಜೆ ಹೋಮ, ಪೂಜೆ ಹಾಗೂ ಅಭಿಷೇಕ ಕಾರ್ಯಕ್ರಮಗಳು ನಡೆದವು. ಸೋಮವಾರ ಬೆಳಗ್ಗೆ ಕಳಸೋತ್ಸವ, ಅಭಿಷೇಕ ಮತ್ತು ಮಹಾಮಂಗಳಾರತಿ ವಿಧಿವಿಧಾನಗಳು ನೆರವೇರಿದವು. ಕಳಸ ಮೆರವಣಿಗೆಯ ಸಂದರ್ಭದಲ್ಲಿ ನಡೆದ ವೀರಗಾಸೆ ನೃತ್ಯ ಭಕ್ತರ ಗಮನ ಸೆಳೆಯಿತು.

ಜಾತ್ರೆ ಅಂಗವಾಗಿ ಸುತ್ತಮುತ್ತಲಿನ ಗ್ರಾಮಗಳಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ದರ್ಶನ ಪಡೆದು ಆಶೀರ್ವಾದ ಪಡೆದರು. ಆಗಮಿಸಿದ ಎಲ್ಲ ಭಕ್ತರಿಗೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು.

ದೇವಾಲಯದ ಅರ್ಚಕರಾದ ಜಗದೀಶ್ ಐನಾರ್ ಹಾಗೂ ಮಹಾಲಿಂಗ ಐನಾರ್ ಪೂಜೆಗಳಿಗೆ ನೇತೃತ್ವ ವಹಿಸಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು, ಸಾರ್ವಜನಿಕರು ಹಾಗೂ ಭಕ್ತಾದಿಗಳು ಭಾಗವಹಿಸಿದ್ದರು.

## ಇತಿಹಾಸದಲ್ಲಿ ಈ ದಿನ

### ಏಪ್ರಿಲ್-08

1857: ಭಾರತದಲ್ಲಿ ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಹೋರಾಟದ ವೇಳೆ ಮಂಗಲ್ ಪಾಂಡೆ ಅವರನ್ನು ಬಂಧಿಸಲಾಯಿತು.

1929: ಭಗತ್ ಸಿಂಗ್ ಮತ್ತು ಬಟುಕೇಶ್ವರ ದತ್ ಅವರು ದೆಹಲಿಯ ಕೇಂದ್ರ ಶಾಸನ ಸಭೆಯಲ್ಲಿ ಬಾಂಬ್ ಎಸೆದು ಬ್ರಿಟಿಷರ ವಿರುದ್ಧ ಪ್ರತಿಭಟನೆ ನಡೆಸಿದರು.

2005: ಪೋಪ್ ಪೋಪ್ ಜಾನ್ ಪಾಲ್ ಅವರ ಅಂತ್ಯಕ್ರಿಯೆ ವಾಟಿಕನ್ ನಗರದಲ್ಲಿ ನೆರವೇರಿತು.

**ಜನನ**

1892: ಮೇರಿ ಪಿಕ್‌ಫೋರ್ಡ್, ಪ್ರಸಿದ್ಧ ಹಾಲಿವುಡ್ ನಟಿ

1938: ಕೊಫಿ ಅನ್ನಾನ್, ವಿಶ್ವಸಂಸ್ಥೆಯ ಮಾಜಿ ಪ್ರಧಾನ ಕಾರ್ಯದರ್ಶಿ

**ನಿಧನ**

1973: ಪಾಬ್ಲೋ ಪಿಕಾಸೋ, ಜಗತ್ತಿನ ಪ್ರಸಿದ್ಧ ಚಿತ್ರಕಾರ

2013: ಮಾರ್ಗರೇಟ್ ಥಾಚರ್, ಬ್ರಿಟನ್‌ನ ಮಾಜಿ ಪ್ರಧಾನಮಂತ್ರಿ

## 16 ಮಳಿಗೆಗಳಿಗೆ ಶೀಘ್ರ ಇ-ಟೆಂಡರ್: ತಾಪಂ ಇಒ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಬೇಲೂರು: ತಾಲೂಕು ಪಂಚಾಯಿತಿಗೆ ಸೇರಿದ 20 ಮಳಿಗೆಯಲ್ಲಿ 16 ಮಳಿಗೆಗಳ ಅವಧಿ ಮುಕ್ತಾಯವಾದ ಹಿನ್ನೆಲೆಯಲ್ಲಿ ಇ-ಟೆಂಡರ್ ಮೂಲಕ ಬಹಿರಂಗ ಹರಾಜು ಹಾಕಲಾಗುತ್ತದೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸತೀಶ್ ಕುಮಾರ್ ತಿಳಿಸಿದರು. ತಾಲೂಕು ಪಂಚಾಯಿತಿಗೆ ವರಮಾನ ಬರಲೆಂದು 20 ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಲಾಯಿತು. ಅದರಲ್ಲಿ 16 ವಾಣಿಜ್ಯ ಮಳಿಗೆಗಳು ಅವಧಿ ಪೂರ್ಣವಾಗಿ ಮೂರು ವರ್ಷ ಕಳೆದಿತ್ತು. ಕೆಲ ತಾಂತ್ರಿಕ ಹಿನ್ನೆಲೆಯಲ್ಲಿ ಹರಾಜು ನಡೆಸುವ ಪ್ರಕ್ರಿಯೆ ತಡವಾಗಿತ್ತು. ಸದ್ಯ ನಾವು ಬಂದ ಬಳಿಕ 16 ವಾಣಿಜ್ಯ ಮಳಿಗೆಗಳ ಹಿಂದಿನ ಬಾಡಿಗೆದಾರರನ್ನು ತೆರವುಗೊಳಿಸಿ ಹರಾಜು ಪ್ರಕ್ರಿಯೆಗೆ ಸಿದ್ಧಪಡಿಸಲಾಗಿದೆ ಎಂದ ಅವರು ಒಟ್ಟು 16 ವಾಣಿಜ್ಯ ಮಳಿಗೆಗಳ ಇ-ಟೆಂಡರ್ ಹರಾಜು ಕಾನೂನು ಪ್ರಕಾರ ಮತ್ತು ಮೀಸಲಾತಿ ನೀಡಬೇಕು ಎಂಬ ಹಿನ್ನೆಲೆಯಲ್ಲಿ ಈಗಾಗಲೇ ಪರಿಶಿಷ್ಟ ಜಾತಿ ವರ್ಗಕ್ಕೆ ಮೂರು ಮಳಿಗೆ ಪರಿಶಿಷ್ಟ ಪಂಗಡಕ್ಕೆ ಒಂದು ಮಳಿಗೆ ಮತ್ತು ಅಂಗವಿಕಲರಿಗೆ ಒಂದು ಮಳಿಗೆ ಮೀಸಲಿಟ್ಟಲಾಗಿದೆ ಸಾರ್ವಜನಿಕರು ಈ ಟೆಂಡರ್ ಮೂಲಕ ಯಾವುದೇ ಬಹಿರಂಗ ಹರಾಜಿಗೆ ಮುಂದಾಗಬಹುದು ಇದರಲ್ಲಿ ಯಾವುದೇ ರಾಜಕೀಯ ಒತ್ತಡ ಮತ್ತು ಇನ್ನಿತರ ಶಿಫಾರಸ್ಸು ಪ್ರಕಾರ ಸರ್ಕಾರದ ನೀತಿ ನಿಯಮಗಳ ಅನ್ವಯದಲ್ಲಿ ಗೌಪ್ಯತೆಯಿಂದ ಟೆಂಡರ್ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ. ಪಾರದರ್ಶಕತೆಗೆ ಹೆಚ್ಚಿನ ಒತ್ತನ್ನು ನೀಡಲು ತಾಲೂಕು ಪಂಚಾಯಿತಿ ಬದ್ಧವಾಗಿದೆ ಎಂದರು.

ಒಟ್ಟು 16 ಮೂಲಗಳು ಕಳೆದ ನಾಲ್ಕು ವರ್ಷಗಳ ಹಿಂದೆ ಅವಧಿ ಮೀರಿದ್ದರು ಕೂಡ ಬಾಡಿಗೆ ಪಾವತಿ ಮಾಡದ 54 ಲಕ್ಷ ರೂ. ವಾಗಿತ್ತು. ಈಗಾಗಲೇ 16 ಲಕ್ಷ ರೂ. ವಸೂಲಿ ಮಾಡಿದ್ದು ಉಳಿದ 38 ಲಕ್ಷವನ್ನು ನ್ಯಾಯಾಲಯದ ಮುಖಾಂತರ ವಸೂಲಿ ಮಾಡಲಾಗುತ್ತದೆ.

ಇದರಲ್ಲಿ ಯಾವುದೇ ರಾಜ್ಯ ಸಂಧಾನ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಒಂದು ವೇಳೆ ಈ ಹಿಂದಿನ ಬಾಡಿಗೆದಾರರು ತಮ್ಮ ಬಾಕಿ ಬಾಡಿಗೆ ಮೊತ್ತವನ್ನು ಸರ್ಕಾರದ ಅನ್ವಯ ಪಾವತಿ ಮಾಡಿ ನಮ್ಮಿಂದ ಅನುಮತಿಯನ್ನು ಪಡೆದು ಟೆಂಡರ್ ನಲ್ಲಿ ಭಾಗವಹಿಸುವ ಅವಕಾಶವಿದೆ. ಯಾರು ಪಾವತಿ ಮಾಡುವುದಿಲ್ಲ ಅವರಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಅವರ ಮೇಲೆ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

## ಎಲ್‌ಪಿಜಿ ಇಲ್ಲದೆ ಹೇಳತೀರದ ಆಟೋ ಚಾಲಕರ ಪರದಾಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವನ್ನು ದೇಶದ ಜನರು ಎದುರಿಸುವಂತಾಗಿದ್ದು, ಪಟ್ಟಣದಲ್ಲಿ ಕಳೆದ 15 ದಿನಗಳಿಂದಲೂ ಆಟೋ ಎಲ್‌ಪಿಜಿ ಅಭಾವದಿಂದ ಎಲ್‌ಪಿಜಿಗಾಗಿ ಚಾತಕ ಪಕ್ಷಿಯಂತೆ ಚಾಲಕರು ಎದುರು ನೋಡುವಂತಾಗಿದೆ.

ಸರ್ಕಾರಗಳು ಆಟೋ ಎಲ್‌ಪಿಜಿಗೆ ಯಾವುದೇ ಸಮಸ್ಯೆ ಇಲ್ಲ ಅಗತ್ಯಕ್ಕೆ ತಕ್ಕಂತೆ ಪೂರೈಸಲಾಗುತ್ತಿದೆ ಎಂದು ಹೇಳುತ್ತಿವೆ. ಆದರೆ ಪಟ್ಟಣದಲ್ಲಿ ಮಾತ್ರ 15 ದಿನಗಳಿಂದ ಎಲ್‌ಪಿಜಿ ಇಲ್ಲದೆ ಇರುವ ಎರಡು ಬಂಕ್‌ಗಳು ಮುಚ್ಚಿವೆ. ಕಳೆದ ವಾರ ಆಟೋ ಚಾಲಕರು ಪ್ರತಿಭಟನೆ ನಡೆಸಿದ ಹಿನ್ನೆಲೆಯಲ್ಲಿ ಒಂದು ಬಾರಿ 97.65 ರೂ.ಗೆ ಎಲ್‌ಪಿಜಿ ಗ್ಯಾಸ್ ನೀಡಲಾಗಿತ್ತು. ಆದರೆ ಈಗ ತಾಲೂಕಿನಲ್ಲಿ ಗ್ಯಾಸ್ ಇಲ್ಲದ ಕಾರಣ ಹಾಸನದ ಕೆಲ ಗ್ಯಾಸ್ ಬಂಕ್‌ಗಳಿಗೆ ಹೋಗಿ 87.65ರೂಗೆ ಹಾಕಿಸಿಕೊಂಡು ಬರುವ ಅನಿವಾರ್ಯತೆ ಎದುರಾಗಿದೆ.

ಆಟೋಗಳನ್ನೇ ನಂಬಿಕೊಂಡು ಜೀವನ ಕಟ್ಟಿಕೊಂಡಿರುವವರ ಬದುಕು ಈಗ ಅತಂತ್ರವಾಗಿ ಸಾಲ ಮಾಡಿ ಆಟೋ ಖರೀದಿಸಿರುವವರು ತಿಂಗಳ ಕಂತು ಕಟ್ಟಲೂ ಸಾಧ್ಯವಾಗದೆ ಪರದಾಡುವಂತಾಗಿದೆ.

ನಿತ್ಯ ಬಂಕ್‌ಗಳ ಬಳಿ ಬಂದು ನೋಡಿಕೊಂಡು ಹೋಗುವಂತಾಗಿದೆ. 15 ದಿನಕ್ಕೊಮ್ಮೆ ಬಂದರೂ ಎರಡೇ ದಿನದಲ್ಲಿ ಖಾಲಿಯಾಗುತ್ತದೆ. ಅದರ ದರವೂ ದುಪ್ಪಟ್ಟು, ಹೀಗಾದರೆ ನಾವು ನಮ್ಮ ಸಂಸಾರ ನಡೆಸುವುದು ಹೇಗಪ್ಪ ಎಂದು ಚಿಂತೆಗೀಡಾಗಿದ್ದಾರೆ. ಪ್ರಸ್ತುತ ದಿನಗಳಲ್ಲಿ ಅಲ್ಲಿ ಯುದ್ಧ ನಿಲ್ಲುವ ಸೂಚನೆಗಳಿಲ್ಲ, ಯುದ್ಧ ಅಲ್ಲಿ ಅದರ ಬಿಸಿ ಮಾತ್ರ ಇಲ್ಲಿ ಎಂದು ಬಹುತೇಕ ಆಟೋ ಚಾಲಕರು ಪರ್ಯಾಯ ಉದ್ಯೋಗದತ್ತ ಮುಖ ಮಾಡುವಂತಾಗಿದೆ. ಪಟ್ಟಣದಲ್ಲಿ ಪೆಟ್ರೋಲ್, ಡೀಸೆಲ್ ಕೊರತೆ ಇಲ್ಲದಿರುವುದರಿಂದ ಪೆಟ್ರೋಲ್‌ನಿಂದ ಓಡಿಸುವ ಆಟೋಗಳ ಚಾಲಕರು ಸ್ವಲ್ಪಮಟ್ಟಿಗೆ ಉಸಿರಾಡುವಂತಾಗಿದೆ.

ಮತ್ತೊಂದು ಕಡೆ ಗೃಹ ಬಳಕೆ ಎಲ್‌ಪಿಜಿಗೂ ದಿನೇ ದಿನೇ ಬೇಡಿಕೆ ಹೆಚ್ಚಾಗುತ್ತಲೆ ಇದೆ. ಈಗಲೂ ಗ್ರಾಹಕರು ತಮ್ಮ ತಮ್ಮ ಎಲ್‌ಪಿಜಿ ಏಜೆನ್ಸಿಗಳ ಕಚೇರಿಗಳ ಮುಂದೆ ಬೆಳಿಗ್ಗೆ ಎದ್ದರೆ ಸಿಲಿಂಡರ್‌ಗಾಗಿ ಕಾಯುವಂತಾಗಿದೆ. 25 ದಿನಗಳಾದರೂ ಸಿಲಿಂಡರ್ ಸಿಗದ ಕಾರಣ ಆತಂಕಗೊಂಡು ಎಲ್‌ಪಿಜಿ ತುಂಬಿರುವ ಲಾರಿ ಬರುವುದನ್ನು ಎದುರು ನೋಡಿ ಬಂದ ಕೂಡಲೇ ಮುಗಿ ಬಿದ್ದು ಪಡೆಯುವಂತಾಗಿದೆ. ಇನ್ನು ಕಮರ್ಷಿಯಲ್ ಎಲ್ಪಿಜಿ ಸಹ ಆಹಾರ ಇಲಾಖೆಯಂತೆ ಹಿಂದಿಗಿಂತ ಈಗೇನೂ ಬದಲಾಗಿಲ್ಲ. ಮುಂಚೆ ಹೇಗಿತ್ತೋ ಈಗಲೂ ಅಭಾವ ಹಾಗೇ ಇದೆ. ಇದರಿಂದ ಹೋಟೆಲ್ ಉದ್ಯಮ ತತ್ತರಿಸುವಂತಾಗಿದೆ.

ಪಟ್ಟಣದಲ್ಲಿರುವ ಬಹುತೇಕ ಹೋಟೆಲ್‌ಗಳಲ್ಲಿ ಟೀ, ಕಾಫಿಗೂ ಸಿಲಿಂಡರ್ ಇಲ್ಲದೆ ಪರಿತಪಿಸುವಂತಾಗಿದೆ.

## ಖಜಾನೆಗೆ ಮರಳಿದ ಚನ್ನಕೇಶವ ಸ್ವಾಮಿ ಆಭರಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಐತಿಹಾಸಿಕ ಚನ್ನಕೇಶವಸ್ವಾಮಿ ದೇವಸ್ಥಾನದ ಜಾತ್ರಾ ಮಹೋತ್ಸವ ಮುಕ್ತಾಯವಾದ ಹಿನ್ನಲೆಯಲ್ಲಿ ಖಜಾನೆಯಿಂದ ತಂದಿದ್ದ ದೇವರ ಚಿನ್ನಾಭರಣವನ್ನು ಪೊಲೀಸ್ ಬಿಗಿ ಭದ್ರತೆಯಲ್ಲಿ ಸೋಮವಾರ ತಾಲೂಕು ಕಚೇರಿಯ ಖಜಾನೆಗೆ ರವಾನಿಸಲಾಯಿತು.

ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಮಾತನಾಡಿ, ಶ್ರೀ ಚನ್ನಕೇಶವಸ್ವಾಮಿ ಜಾತ್ರಾ, ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ಉತ್ಸವ ಸಮಾಪ್ತಿಯೊಂದಿಗೆ ದೇವರಿಗೆ ಅಲಂಕರಿಸಿದ್ದ ಬಂಗಾರದ ಆಭರಣಗಳನ್ನು ಸುರಕ್ಷಿತವಾಗಿ ಪೊಲೀಸರ ಸಮ್ಮುಖದಲ್ಲಿ ತಂದು ಖಜಾನೆಯಲ್ಲಿ ಮೂಲ ಸ್ಥಳಕ್ಕೆ ಇರಿಸಲಾಗುತ್ತಿದೆ. ಮುಂದಿನ ಜಾತ್ರೆವರೆಗೆ ಅವುಗಳನ್ನು ಸೀಲ್ ಮಾಡಿ ಸಂರಕ್ಷಿಸಲಾಗುವುದು ಎಂದರು.

ದೇಗುಲ ಹಾಗೂ ತಾಲ್ಲೂಕು ಕಚೇರಿ ಸಿಬ್ಬಂದಿ, ಪೊಲೀಸರು ಹಾಜರಿದ್ದರು.



Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248